**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>SC.33/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಕುಮಾರ ಆರ್. |
| ತಂದೆಯ ಹೆಸರು | : | ರಾಮಪ್ಪ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಹಿರಿಯ ತಜ್ಞರು |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 9

ಸಿ.ಡಬ್ಲ್ಯೂ 7

ದಿ: 30-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u>**:

1. 2008 ರಿಂದ ಮೇ 2024 ರವರೆಗೆ ನಾನು ದಾವಣಗೆರೆಯ ಸಿ.ಜಿ. ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿಃ 22-09-2022 ರಂದು ಮಧ್ಯಾಹ್ನ 1.54 ಗಂಟೆಗೆ ವಿರೇಶ ಬಿನ್ ಶೇಖರಪ್ಪರವರು ದಿಃ 20-09-2022 ರಂದು ಸಂಜೆ 5.00 ಗಂಟೆಗೆ ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ಕೈ ಮುಷ್ಟಿ ಮಾಡಿ ಹಲ್ಲೆ ಮಾಡಿರುವ ಬಗ್ಗೆ ಚಿಕಿತ್ಸೆಗಾಗಿ ಬಂದಿದ್ದರು. ನಂತರ ನಾನು ವಿರೇಶ ಬಿನ್ ಶೇಖರಪ್ಪರವರನ್ನು ಪರೀಕ್ಷೆ ಮಾಡಿದಾಗ ಈ ಕೆಳಗಿನಂತೆ ಕಂಡು ಬಂದಿರುತ್ತವೆ.

* Tenderness present over the right temporal region near right eye.
* Tenderness present over the right shoulder region.

2. In opinion, the above injuries are simple in nature. ಇದರ ಬಾಬ್ತು ನಾನು ನೀಡಿರುವ ಗಾಯದ ಪ್ರಮಾಣ ಪತ್ರವನ್ನು ನಿಪಿ-12 ಅಂತ, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಅಂತ ಗುರುತಿಸಲಾಯಿತು. ಕೈ ಮುಷ್ಟಿಯಿಂದ ಹಲ್ಲೆ ಮಾಡಿದಾಗ ಇಂತಹಗಾಯಗಳು ಸಂಭವಿಸುತ್ತವೆ.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ**:

3. External injury ಇದ್ದರೆ ಮಾತ್ರ the age of the injury ಬರೆಯಬಹುದು. ಗಾಯಾಳು ಅವರಿಗೆ ನೋವು ಇದೆ ಅಂತ ಹೇಳಿದರು ಅದಕ್ಕೆ ನೋವು ಇದೆ ಅಂತ ಹೇಳಿದ್ದೇನೆ. ಗಾಯಾಳು ಕೈ ಗಾಡಿಯನ್ನು ನಡೆಸಿಕೊಂಡು ಹೋಗುತ್ತಿರುವಾಗ ಎದುರುಗಡೆ ಯಾವುದೇ ಗಾಡಿ ಬಂದು ಡಿಕ್ಕಿ ಹೊಡೆದಾಗ ಈ ರೀತಿ ಗಾಯಗಳು ಆಗುತ್ತವೆ ಅಂದರೆ ಸರಿಯಲ್ಲ. ಹೈಸ್ಕೂಲ್ ಮೈದಾನದಲ್ಲಿ ಸಾಕಷ್ಟು ವಾಹನಗಳು ಬರುತ್ತವೆ ಅಂದರೆ ನಿಜ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.